ಅಂದುಕೊಳ್ಳುತ್ತಾನೆ: ''ಹೋದ್ಯಾ ಪಿಶಾಚಿ ಅಂದ್ರೆ ಮತ್ತೆ ಬಂದ ಗವಾಕ್ಷೀಲಿ.''

ಇಷ್ಟೆಲ್ಲಾ ಉದಾಹರಣೆಗಳೊಂದಿಗೆ ಹೇಳಿದ ಮೇಲೆ ಇದೊಂದು ಬಹು ಜನಪ್ರಿಯ ಗಾದೆ ಅನ್ನುವುದು ಮನದಟ್ಟಾಗುತ್ತದೆ. ಸೀನ ಅದನ್ನು ಬಳಸಿದ್ದರಲ್ಲಿ ವಿಶೇಷವೇನಿಲ್ಲ, ಅಲ್ಲವೇ?!

ಇನ್ನು ನಮ್ಮ ಪುರಾಣಗಳಲ್ಲಿಯೂ ಈ ಗಾದೆಗೆ ಹೊಂದುವ ಅಸಂಖ್ಯಾತ ಕಥೆಗಳುಂಟು. ಸದ್ಯಕ್ಕೆ ಒಂದನ್ನು ನೋಡೋಣ.

ಅಭಿಮನ್ಯುವಿನ ಮಗ ಪರೀಕ್ಷಿತ ಮಹಾರಾಜ ಒಮ್ಮೆ ಭೇಟೆಗೆ ಹೋಗಿದ್ದಾಗ ಬಾಯಾರಿ ಬಳಲಿ ನೀರನ್ನು ಹುಡುಕುತ್ತಾ ಶಮೀಕ ಮುನಿಯ ಆಶ್ರಮಕ್ಕೆ ಬರುತ್ತಾನೆ. ಧ್ಯಾನಕ್ಕೆ ಕುಳಿತ ಮುನಿಗೆ ಇವನು ಬಂದಿದ್ದರ ಬಗ್ಗೆ ಗಮನವೇ ಇಲ್ಲ. ಅವನು ಕಣ್ಣು ತೆರೆಯಲೂ ಇಲ್ಲ. ಅವಮಾನಿತನಾಗಿ, ಕೋಪಗೊಂಡ ಚಕ್ರವರ್ತಿ ಅಲ್ಲಿಯೇ ಸತ್ತು ಬಿದ್ದಿದ್ದ ಹಾವೊಂದನ್ನು ಮುನಿಯ ಕೊರಳಿನ ಸುತ್ತ ಹಾಕಿ ಹೊರಟು ಹೋಗುತ್ತಾನೆ. ಏನೋ ಕೆಲಸದ ಮೇಲೆ ಹೊರಗೆ ಹೋಗಿದ್ದ ಮುನಿಯ ಪುತ್ರ ಶ್ರುಂಗಿ ಆಶ್ರಮಕ್ಕೆ ಬಂದವನು ಈ ದೃಶ್ಯವನ್ನು ನೋಡಿ ವ್ಯಗ್ರನಾಗಿ ಈ ಕೆಲಸ ಮಾಡಿದವನಿಗೆ ಇಂದಿನಿಂದ ಏಳು ದಿನಗಳ ಒಳಗೆ ಹಾವಿನ ಕಡಿತದಿಂದಲೇ ಸಾವು ಬರಲಿ ಎಂದು ಶಾಪ ಕೊಡುತ್ತಾನೆ.

